## ಸುಭಾಷಿತ ಮಂಜರಿ

ಛಿನ್ನೋऽಪಿ ರೋಹತಿ ತರುಃ
ಕ್ಷೀಣೋಪ್ಯುಪಚೀಯತೇ ಚಂದ್ರಃ ।
ಇತಿ ವಿಮೃಶಂತಃ ಸಂತಃ
ಸಂತಪ್ಯಂತೇ ನ ವಿಪ್ಲುತಾ ಲೋಕೇ ॥
–ಭರ್ತೃಹರಿ: ನೀತಿಶತಕ

"ಮರವನ್ನು ಕಡಿದರೂ ಅದು ಮತ್ತೆ ಬೆಳೆಯುತ್ತದೆ. ಚಂದ್ರನು ಒಮ್ಮೆ ಸೊರಗಿದರೂ ಮತ್ತೆ ಬೆಳೆದು ಪ್ರಕಾಶಿಸುತ್ತಾನೆ. ಹೀಗೆ ವಿಚಾರ ಮಾಡುವ ಸಜ್ಜನರು ಆಪತ್ತಿಗೊಳಗಾದರೂ ದುಃಖಪಡದೆ ಪ್ರಯತ್ನಶೀಲರಾಗುತ್ತಾರೆ"

**ಆತ್ಮೀಯ ಓದುಗರೇ,**

**ನವರಾತ್ರಿಯ ಪರ್ವ ಕಳೆದು ದೀಪಾವಳಿಯು ಸನ್ನಿಹಿತವಾಗುತ್ತಿದೆ. ತಮಸೋಮಾ ಜ್ಯೋತಿರ್ಗಮಯ ಇದು ಹಿರಿಯರು ನಮಗೆ ತೋರಿದ ಬೆಳಕು ಈ ಬೆಳಕಲ್ಲಿ ಮುನ್ನಡೆಯೋಣ. ಒಂದು ಹಂತದಲ್ಲಿ ಚೀನಾ ನಮ್ಮ ದೇಶದ ಆರ್ಥಿಕತೆಯನ್ನೇ ಬುಡಮೇಲು ಮಾಡುವ ಹುನ್ನಾರದೊಂದಿಗೆ, ಗಡಿಯಲ್ಲೂ ತೆಗೆದ ತಕರಾರನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಿದ ಜಯ ನಮ್ಮ ಪಾಲಿಗಿದೆ. ಇದೇ ಭರವಸೆಯಲ್ಲಿ ದೀಪಾವಳಿಯ ಆಚರಣೆ ನಡೆ–ಯಲಿ. ಆದರೆ ಚೀನಾದ ಯಾವ ವಸ್ತುಗಳೂ ನಮ್ಮ ದೀಪಾವಳಿಯ ಭಾಗವಾಗದಿರಲಿ ಎಂಬ ಎಚ್ಚರಿಕೆ ಇರುವುದಲ್ಲವೇ....? ಬೆಳಕಿನ ಹಬ್ಬ ದೀಪಾವಳಿಯ ಶುಭಾಶಯಗಳು.**

**ಬೆಳಕಿನ ಕಡೆ ಮುಖ ಮಾಡೋಣ....**

**ವಂದನೆಗಳು**

**ಸಂಪಾದಕ ಬಳಗ**

## ಸಂಪಾದಕೀಯ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ಪೂರ್ಣಿಮಾ (ಶಿಶುಮಂದಿರ)
ರೂಪಕಲಾ (ಪ್ರಾಥಮಿಕ ಶಾಲೆ)
ಮನೋಜ್ (ಪ್ರೌಢಶಾಲೆ)
ಹರ್ಷಿತಾ (ಪಿ.ಯು.ಸಿ)
ಶೈಲಜಾ (ಪದವಿ)
ವಿನುತ ಎಸ್.ಎನ್. (ಮಕ್ಕಳ ಪುಟ)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಚೂರು

# ಸಮಾಜದ ಕೀರ್ತಿಪತಾಕೆ

**ಚಿಂತನರಶ್ಮಿ**

ಕನ್ನಡದ ಖ್ಯಾತ ಪ್ರೊಫೆಸರ್ ಟಿ.ಎಸ್. ವೆಂಕಣ್ಣಯ್ಯನವರು ಕೆಲಸದ ಮೇಲೆ ಆಗಾಗ ಬೆಂಗಳೂರಿಗೆ ಬಂದು ಹೋಗುತ್ತಿದ್ದರು. ಅವರು ಮೈಸೂರಿನಿಂದ ರಾತ್ರಿ ರೈಲು ಹಿಡಿಯಬೇಕಾದಾಗ ಮನೆಯಿಂದ ನಡೆದೇ ರೈಲ್ವೆ ನಿಲ್ದಾಣಕ್ಕೆ ಹೋಗುವವರು. ಜಟಕಾಗಾಡಿಯನ್ನು ತೆಗೆದುಕೊಂಡವರಲ್ಲ. ಬೆಂಗಳೂರಿನಲ್ಲಿ ಬೆಳಿಗ್ಗೆ ಇಳಿದ ಮೇಲೆ ನಡೆದುಕೊಂಡು ಸ್ನೇಹಿತರ ಮನೆಗೆ ಹೋಗಿ ಅಲ್ಲಿಯೇ ಕಾಫಿ ಕುಡಿಯುವರು. "ನೀವು ಯಾಕೆ ಕುದುರೆ ಗಾಡಿಯಲ್ಲಿ ಹೋಗಬಾರದು?" ಎಂದು ಕೇಳಿದರೆ, "ಸುಮ್ಮನೇ ಹಣ ವ್ಯರ್ಥ. ಅದನ್ನೇ ಉಳಿಸಿದರೆ ಒಂದು ಬಡ ಸಂಸಾರದ ಒಂದು ದಿನದ ಊಟದ ಖರ್ಚು ನಿಭಾಯಿಸಬಹುದು" ಎನ್ನುವರು. ಅವರಿಗೆ ನಶ್ಯದ ಚಟವಿತ್ತು. ಈ ಅಭ್ಯಾಸವನ್ನು ಬಿಟ್ಟರೆ ಚೆನ್ನಾಗಿತ್ತು. ಈ ವ್ಯರ್ಥವಾದ ಖರ್ಚನ್ನು ಮಾಡುವುದನ್ನು ಬಿಟ್ಟು ಯಾವುದಾದರೂ ದಾಸಯ್ಯನಿಗೆ ಕೊಟ್ಟಿದ್ದರೆ ಊಟ ಮಾಡಿಕೊಳ್ಳುತ್ತಿದ್ದ ಪಾಪ!" ಎಂದು ಗೊಣಗಿಕೊಳ್ಳುವರು. ಅವರನ್ನು ಯಾರಾದರೂ ಹೀಗೆ ನೋಡಿದರೆ ಎಂಥ ಜಿಪುಣರಪ್ಪ ಇವರು ಎಂದುಕೊಳ್ಳಬಹುದಾಗಿತ್ತು.

ಒಂದು ದಿನ ಮನೆಯಲ್ಲಿದ್ದಾಗ ಅಂಚೆಯವನು ಆ ದಿನದ ಟಪಾಲನ್ನು ತಂದುಕೊಟ್ಟು ಹೋದ. ವೆಂಕಣ್ಣಯ್ಯನವರು ಒಂದೊಂದನ್ನೇ ತೆಗೆದು ಓದಿ ಮಡಚಿ ಇಡುತ್ತಿದ್ದರು. ಅಲ್ಲೊಂದು ದೀರ್ಘವಾದ ಪತ್ರ ಬಂದಿತ್ತು. ಅದನ್ನು ಓದುತ್ತ ಓದುತ್ತ ವೆಂಕಣ್ಣಯ್ಯನವರು ಗಂಭೀರವಾದರು. ಮತ್ತೊಮ್ಮೆ ಆ ಪತ್ರವನ್ನೋದಿ ಅಂತರ್ಮುಖರಾದರು. ಅವರ ಮುಖದಿಂದ ಒಂದು ದೀರ್ಘ ನಿಟ್ಟುಸಿರು ಬಂತು. ಕಣ್ಣುಮುಚ್ಚಿ ಕುಳಿತರು.

ಸ್ವಲ್ಪ ಸಮಯದ ನಂತರ ಅಲ್ಲಿಯೇ ಓದುತ್ತಿದ್ದ ತಮ್ಮ ತ.ಸು. ಶಾಮರಾಯರನ್ನು ಕರೆದು, "ಶಾಮಣ್ಣಾ ಕಪಾಟಿನಲ್ಲಿ ಎಷ್ಟು ಹಣ ಇದೆ ನೋಡಿ ತಾ" ಎಂದರು. ಶಾಮರಾಯರು ಎದ್ದು ಹೋಗಿ ದುಡ್ಡು ಎಣಿಸಿ ಹೇಳಿದರು, "ನೂರೈವತ್ತು ರೂಪಾಯಿ ಇದೆ ಅಣ್ಣ'. "ಹೌದೇ? ಅಷ್ಟು ಸಾಲದಲ್ಲ. ನೀನು ಸೊಸೈಟಿಗೆ ಹೋಗಿ ಇನ್ನೊಂದು ನೂರು ರುಪಾಯಿ ತೆಗೆದುಕೊಂಡು ಬಾ' ಎಂದರು ವೆಂಕಣ್ಣಯ್ಯ. ನಂತರ ಸೊಸೈಟಿಯ ಪಾಸ್‌ಬುಕ್ ತೆಗೆದು ನೋಡಿದರೆ ಅದರಲ್ಲಿ ಇದ್ದದ್ದು ಕೇವಲ ನಲವತ್ತು ರೂಪಾಯಿ.

ಒಂದು ಕ್ಷಣ ಯೋಚನೆ ಮಾಡಿ ಹೇಳಿದರು, "ಪರವಾಗಿಲ್ಲ ಶಾಮಣ್ಣ, ನನಗೆ ಸೊಸೈಟಿಯಿಂದ ನೂರು ರೂಪಾಯಿ ಓವರ್ ಡ್ರಾಫ್ಟ್ ಮಾಡುವ ಸೌಲಭ್ಯವಿದೆ. ಹೋಗಿ ನೂರು ರೂಪಾಯಿ ತೆಗೆದುಕೊಂಡು ಬಾ" ಹಣಕ್ಕೆ ಚೆಕ್ ಬರೆದುಕೊಟ್ಟರು. ಶಾಮಣ್ಣ ಹೋಗಿ ಹಣ ತಂದುಕೊಟ್ಟರು.

ಈಗ ಒಟ್ಟು ಇನ್ನೂರೈವತ್ತು ರೂಪಾಯಿ ಶೇಖರಣೆಯಾಯಿತು. ಆಗ ವೆಂಕಣ್ಣಯ್ಯನವರು ತಾವು ಓದುತ್ತಿದ್ದ ಪತ್ರದಲ್ಲಿದ್ದ ವಿಳಾಸವನ್ನು ಒಂದು ಕಾಗದದ ಮೇಲೆ ಬರೆದು ಕೊಟ್ಟು ತಮ್ಮನಿಗೆ ಹೇಳಿದರು, "ಶಾಮಣ್ಣ, ಈ ವಿಳಾಸಕ್ಕೆ ಇನ್ನೂರೈವತ್ತು ರೂಪಾಯಿ ಮನಿಯಾರ್ಡರ್ ಮಾಡಿ ಬಾ. ಪಾಪ! ಯಾವುದೋ ಬಡ ಹುಡುಗ ಲಾ ಕಾಲೇಜಿನಲ್ಲಿ ಓದುತ್ತಿದ್ದಾನೆ. ಪರೀಕ್ಷೆಗೆ ಕಟ್ಟಲು ಹಣವಿಲ್ಲವಂತೆ. ಛೇ ಇಡೀ ವರ್ಷವೆಲ್ಲ ಓದಿದ್ದು ವ್ಯರ್ಥವಾಗುತ್ತದೆ". ಶಾಮಣ್ಣ ಹೊರಟು ನಿಂತಾಗ ಮತ್ತೆ, " ನೋಡು ಮನಿಯಾರ್ಡರ್ ಮಾಡಿದ ಮೇಲೆ ಆ ಮನಿಯಾರ್ಡರ್ ರಸೀತಿಯನ್ನು, ಆ ವಿಳಾಸ ಬರೆದಿರುವ ಕಾಗದವನ್ನು ಅಲ್ಲೇ ಹರಿದು ಹಾಕಿ ಬಂದು ಬಿಡು. ಮನೆಯಲ್ಲಿ ಯಾರಿಗೂ ಗೊತ್ತಾಗುವುದು ಬೇಡ" ಎಂದು ಎಚ್ಚರಿಸಿದರು. ಅಷ್ಟೇ ಅಲ್ಲ. ಆ ಬಡಹುಡುಗ ಬರೆದಿದ್ದ ಪತ್ರವನ್ನು ಹರಿದು ಹೊರಕ್ಕೆಸೆದುಬಿಟ್ಟರು.

ಕುದುರೆಗಾಡಿಯಲ್ಲಿ ಹೋದರೆ, ನಸ್ಯ ಸೇದಿದರೆ ಹಣ ವ್ಯರ್ಥವಾಗುತ್ತದೆಂದು ಗೊಣಗುತ್ತಿದ್ದ ವೆಂಕಣ್ಣಯ್ಯನವರು ಹೀಗೆ ಹಣ ಕೊಡುವಾಗ ಎಂದೂ ಹಿಂದೆಮುಂದೆ ನೋಡಿದ್ದಿಲ್ಲ. ಅಂಥ ಮಹಾನುಭಾವರು ನಮ್ಮ ಸಮಾಜದ ಕೀರ್ತಿಪತಾಕೆಗಳಂತಿದ್ದವರು.

■

## ಶ್ರೀ ಅಕ್ಕಮಹಾದೇವಿ ಶಿಶುಮಂದಿರ ಅಜ್ಜಿಬೆಟ್ಟು ಶ್ರೀ ಕೃಷ್ಣ ಜನ್ಮಾಷ್ಟಮಿ –13/9/2017

ಶ್ರೀಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಸ್ನೇಹಾಂಜಲಿ ಸೇವಾ ಸಂಘದ ವತಿಯಿಂದ ನಡೆಯುತ್ತಿರುವ ಮೊಸರು ಕುಡಿಕೆ ಕಾರ್ಯಕ್ರಮದಲ್ಲಿ ಶಿಶುಮಂದಿರದ 24 ಪುಟಾಣಿಗಳು ಶೀಕೃಷ್ಣ ಹಾಗೂ ರಾಧೆಯ ವೇಷಧಾರಿಗಳಾಗಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ನೀಡಿದರು. ಮತ್ತು ಶಿಶುಮಂದಿರದ ಎಲ್ಲಾ ಮಕ್ಕಳಿಗೆ ಸ್ಮರಣಿಕೆ ನೀಡಿದರು.

### ಪ್ರತಿಭಾ ಕಾರಂಜಿಯಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆ

ದಿನಾಂಕ: 11.09.2017ರಂದು ಉಪ್ಪಿನಂಗಡಿ ಇಂದ್ರಪ್ರಸ್ಥ ವಿದ್ಯಾಸಂಸ್ಥೆಯಲ್ಲಿ ನಡೆದ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಸುಧಾಂಶು–ಯಕ್ಷಗಾನ ಪ್ರಥಮ, ಪದ್ಮಶ್ರೀ – ಧಾರ್ಮಿಕ ಪಠಣ (ಸಂಸ್ಕೃತ) ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.



ಸುಧಾಂಶು



ಪದ್ಮಶ್ರೀ

# ಪ್ರೌಢಶಾಲಾ ವಿಭಾಗ

### ಪ್ರಾಂತ ಸಂಚಾಲಕಿ ಶ್ರೀಮತಿ ಸುಧಾ ಮೂರ್ತಿಯವರ ಭೇಟಿ

ನಮ್ಮ ಜೀವನ ಸಾರ್ಥಕವಾಗಬೇಕಾದರೆ ನಿಶ್ಚಿತವಾದ ಗುರಿ ಬೇಕು. ಅದನ್ನು ತಲುಪಲು ಸತತ ಪ್ರಯತ್ನವೂ ಬೇಕಾಗಿದೆ. ಅಂತಹ ಶಿಕ್ಷಣ ನಿಮಗೆ ಸಿಗುತ್ತಿದೆ. ಹಿರಿಯರ ಮಾರ್ಗದರ್ಶನದಂತೆ ನಾವು ಮುನ್ನಡೆಯಬೇಕು ಎಂದು ರಾಷ್ಟ್ರ ಸೇವಿಕಾ ಸಮಿತಿಯ ದಕ್ಷಿಣ ಕರ್ನಾಟಕ–ಹೊಯ್ಸಳ ಪ್ರಾಂತ ಸಂಚಾಲಕಿ ಶ್ರೀಮತಿ ಸುಧಾ ಮೂರ್ತಿರವರು ಹೇಳಿದರು. ಸಹ ಸಂಚಾಲಕರಾದ ಡಾ.ಕಮಲ ಪ್ರಭಾಕರ ಭಟ್‌ರವರು ಉಪಸ್ಥಿತರಿದ್ದು– ಕಲಾ ಶಿಕ್ಷಕರಾದ ಜಿನ್ನಪ್ಪ ಏಳ್ತಿಮಾರ್‌ರವರು ಸ್ವಾಗತಿಸಿದರು.

### ದಾವಣಗೆರೆಯ ಶಿಕ್ಷಣ ಸಂಸ್ಥೆಯವರಿಂದ ಭೇಟಿ

01.09.2017 ಮಧುಕರ ಸಭಾಂಗಣದಲ್ಲಿ ನಡೆದ ಸರಸ್ವತಿ ವಂದನಾ ಕಾರ್ಯಕ್ರಮದಲ್ಲಿ G.M.H.P.U.College ದಾವಣಗೆರೆ ಇಲ್ಲಿಯ ಪ್ರದೀಪ್, ಪ್ರಾಂಶುಪಾಲರು ಹಾಗೂ ಉಪನ್ಯಾಸಕರಾದ ಶ್ರೀ ಆದಿನಾರಾಯಣ, ಮಲ್ಲಿಕಾರ್ಜುನ, ರಘುನಾಥ್, ರಾಧಾ, ದೀಪ, ಮಧುಸೂದನ್, ಅನುರೂಪ, ಮಂಜುನಾಥ, ಪ್ರಕಾಶ್‌ಗೌಡ, ವಿನಯ್, ಮಂಗಳಾ, ನಾಗಲಕ್ಷ್ಮೀ, ವಜ್ರೇಶ್, ಗಂಗಾಧರ, ಚಂದ್ರಪ್ಪ, ಮಹಾಂತೇಶ್, ಸಿಬ್ಬಂದಿಗಳಾದ ಸಂತೋಷ್, ಶಿವಕುಮಾರ್, ಪ್ರತಾಪ್ ಆಗಮಿಸಿದರು. ಈ ಸಂದರ್ಭದಲ್ಲಿ ಶ್ರೀರಾಮ ವಿದ್ಯಾಕೇಂದ್ರದ ಸಂಚಾಲಕರಾದ ಶ್ರೀ ವಸಂತಮಾಧವ, ಪ್ರೌಢಶಾಲಾ ಮುಖ್ಯಶಿಕ್ಷಕರಾದ ಶ್ರೀ ರಮೇಶ ಎನ್ ಉಪಸ್ಥಿತರಿದ್ದರು.

### ಅತಿಥಿಗಳ ಭೇಟಿ

ದಿನಾಂಕ:06.09.2017ರಂದು ಶ್ರೀರಾಮ ಪ್ರೌಢಶಾಲೆಯ ಮಧುಕರ ಸಭಾಂಗಣದಲ್ಲಿ ನಡೆದ ಸರಸ್ವತಿ ವಂದನೆ ಕಾರ್ಯಕ್ರಮದಲ್ಲಿ ಪೂರ್ಣಿಮಾ ಪಾಟಿಲ್, ರಾಜ್ಯ ಬಿಜೆ.ಪಿ ಯುವಮೋರ್ಛಾದ ಕಾರ್ಯಕಾರಿಣಿ ಸಮಿತಿ ಸದಸ್ಯರು ಅತಿಥಿಗಳಾಗಿ ಆಗಮಿಸಿದರು. ಈ ಸಂದರ್ಭ ಶಾಲಾ ಮುಖ್ಯ ಶಿಕ್ಷಕ ರಮೇಶ್ ಎನ್ ಉಪಸ್ಥಿತರಿದ್ದರು

### ಜಿಲ್ಲಾ ಮಟ್ಟದ ಜ್ಞಾನ–ವಿಜ್ಞಾನ ಮೇಳ

ದಿನಾಂಕ 02.09.2017ರಂದು ವಿದ್ಯಾಭಾರತಿ ವತಿಯಿಂದ ವಿವೇಕಾನಂದ ಆಂಗ್ಲಮಾಧ್ಯಮ ಪ್ರೌಢಶಾಲೆಯಲ್ಲಿ ನಡೆದ ಜ್ಞಾನ–ವಿಜ್ಞಾನ ಮೇಳದಲ್ಲಿ ಶ್ರೀರಾಮ ಪ್ರೌಢಶಾಲೆಯ 61 ವಿದ್ಯಾರ್ಥಿಗಳು ಸ್ಪರ್ಧಿಸಿ ಈ ಕೆಳಗಿನ ವಿದ್ಯಾರ್ಥಿಗಳು ಪ್ರಶಸ್ತಿಯನ್ನು ಪಡೆದು–ಕೊಂಡಿರುತ್ತಾರೆ.

ಬಾಲವರ್ಗದಲ್ಲಿ ಗಣಿತ ಪ್ರದರ್ಶನದಲ್ಲಿ ಅಕ್ಷಯ್, ವಿಶಾಲ್ 8 ನಚಿಕೇತ ಪ್ರಥಮ, ವಿಪತ್ತು ನಿರ್ವಹಣೆ ಆಧಾರಿತ ಪ್ರತಿರೂಪ ಅಮೃತ 8 ಏಕಲವ್ಯ ದ್ವಿತೀಯ ಸ್ಥಾನ, ವೇದಗಣಿತ ರಸಪ್ರಶ್ನೆಯಲ್ಲಿ ದೀಪಕ್, ಹಿತೇಶ್‌ಗೌಡ 8 ನರೇಂದ್ರ, ಆದಿತ್ಯ ಮೈಥಿಲಿ 8 ಕಣ್ಣಗಿ ತತೀಯ ಸ್ಥಾನ, ಸಂಸ್ಕೃತಿ ಜ್ಞಾನ ರಸಪ್ರಶ್ನೆಯಲ್ಲಿ ಶ್ರೇಯಸ್, ಶ್ರೀಕುಮಾರ್, ಯಶ್ವಿತ್(8 ಕಣ್ಣಗಿ) ದ್ವಿತೀಯ ಸ್ಥಾನ ಪಡೆದುಕೊಂಡಿರುತ್ತಾರೆ.

ಕಿಶೋರವರ್ಗದ ಸ್ಪರ್ಧೆಯಲ್ಲಿ ಇ–ಶಾಸನದಲ್ಲಿ ಮಾಹಿತಿ ಹಾಗೂ ಸಂವಹನ ತಂತ್ರಜ್ಞಾನ ಭೂಮಿಕೆ ಕುರಿತ ಪ್ರತಿರೂಪ ಸ್ಪರ್ಧೆಯಲ್ಲಿ ಶ್ರೀಪತಿ ಕೆ, ಜೀವನ್ 9 ನಿವೇದಿತಾ ಪ್ರಥಮ ಸ್ಥಾನ, ಗಣಕ ಸೃಜನಾತ್ಮಕ ಪ್ರತಿರೂಪದಲ್ಲಿ ಜಯಂತ್ ಶೆಟ್ಟಿ ಎಸ್ ಹಾಗೂ ಹರ್ಷಿತ್ 10 ಚ್ಯವನ ಪ್ರಥಮ ಸ್ಥಾನ, ಸಂಸ್ಕೃತಿ ಜ್ಞಾನ ಪತ್ರವಾಚನ ಸ್ಪರ್ಧೆಯಲ್ಲಿ ಅರ್ಚನಾ ಎಸ್ 9 ಭಾಸ್ಕರ ಪ್ರಥಮ ಸ್ಥಾನ, ವಸ್ತುಗಳ ಅಂತರ್ಜಾಲ ಆಧಾರಿತ ಪ್ರತಿರೂಪದಲ್ಲಿ ಯುಕಿದಾಮೆ, ವಿಕ್ರಮ್ ಆರ್ ಹೆಗ್ಡೆ 10 ಆಜಾದ್ ಪ್ರಥಮ ಸ್ಥಾನ, ಕಂಪ್ಯೂಟರ್ ವಿಜ್ಞಾನ ರಸಪ್ರಶ್ನೆ ಸ್ಪರ್ಧೆಯಲ್ಲಿ ಹರ್ಷಿತಾಎಸ್, ಮೇದಿನಿ, ಕೃಷ್ಣಕಿರಣ್ 10 ಆಜಾದ್ ದ್ವಿತೀಯ, ವಿಜ್ಞಾನ ಸೃಜನಾತ್ಮಕ ಪ್ರತಿರೂಪ ಸ್ಪರ್ಧೆಯಲ್ಲಿ ಜಿತೇಶ್ 9 ಪತಂಜಲಿ, ನಾಗಭೂಷಣ್ 9 ದೇವಶಿಲ್ಪಿ, ಚಿರಂತ್ 9 ದೇವಶಿಲ್ಪಿ ತೃತೀಯ ಸ್ಥಾನ ಪಡೆದಿರುತ್ತಾರೆ.

ಪ್ರಥಮ ಸ್ಥಾನ ಪಡೆದ ವಿಜೇತರು ಬಳ್ಳಾರಿಯಲ್ಲಿ ನಡೆಯುವ ಪ್ರಾಂತೀಯ ಜ್ಞಾನ ವಿಜ್ಞಾನ ಸ್ಪರ್ಧೆಯಲ್ಲಿ ಭಾಗವಹಿಸಲಿದ್ದಾರೆ. ಸಂಸ್ಥೆಯ ಆಡಳಿತ ಮಂಡಳಿ, ಶಿಕ್ಷಕ ವೃಂದ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದ್ದಾರೆ

### ಕ್ಷೇತ್ರೀಯ ಮಟ್ಟದ ಮೇಲಾಟ

ಕ್ಷೇತ್ರೀಯ ಮಟ್ಟದ ಮೇಲಾಟವು ಆಂದ್ರಪ್ರದೇಶದ ಗುಂಟೂರಿನಲ್ಲಿ ದಿನಾಂಕ 31.08.2017ರವರೆಗೆ ಜರುಗಿತು. ನಮ್ಮ ಶಾಲೆಯ ಕ್ರೀಡಾಪಟುಗಳಾದ ನಿಖಿಲ್ ಗುಂಡೆಸೆತದಲ್ಲಿ ತೃತೀಯ ಮತ್ತು ಯೋಬಾಟ್ಕೀ ಈಟಿ ಎಸೆತದಲ್ಲಿ ತೃತೀಯ ಸ್ಥಾನ ಪಡೆದಿರುತ್ತಾರೆ.

### ಪ್ರಬಂಧ ಸ್ಪರ್ಧೆ

ದಿನಾಂಕ 05.09.2017ರಂದು ಶಿಕ್ಷಕರ ದಿನಾಚರಣೆ ಪ್ರಯುಕ್ತ ಸ್ವಚ್ಛ ಭಾರತ್ ಮಿಷನ್ ಅಡಿಯಲ್ಲಿ 'ಸ್ವಚ್ಛ ಭಾರತದಲ್ಲಿ ನಿರ್ಮಾಣದಲ್ಲಿ ನನ್ನ ಪಾತ್ರ' ಎಂಬ ವಿಷಯದ ಕುರಿತು ಪ್ರಬಂಧ ಸ್ಪರ್ಧೆ ನೆರವೇರಿತು. ಕಲಾ ಶಿಕ್ಷಕರಾದ ಶ್ರೀ ಜಿನ್ನಪ್ಪ ಕಾರ್ಯಕ್ರಮ ಸಂಯೋಜಿಸಿದರು.

### ತಾಲೂಕು ಮಟ್ಟದ ಪ್ರತಿಭಾಕಾರಂಜಿ–2017–18

ದಿನಾಂಕ 06.09.2017 ರಂದು ಲೊ–ರೆಟ್ಟಾ ವಿದ್ಯಾಸಂಸ್ಥೆಯಲ್ಲಿ ನಡೆದ ತಾಲೂಕು ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಶ್ರೀರಾಮ ಪ್ರೌಢಶಾಲಾ ವಿಭಾಗದ ಸುಧಾಂಶು–ಯಕ್ಷಗಾನ ಪ್ರಥಮ, ಪದ್ಮಶ್ರೀ – ಧಾರ್ಮಿಕ ಪಠಣ(ಸಂಸ್ಕೃತ) –ಪ್ರಥಮ, ವೈಷ್ಣವಿ ಪ್ರಭು–ಗಝುಲ್ –ದ್ವಿತೀಯ, ಅಯ್ಯಪ್ಪ–ತೆಲುಗು ಭಾಷಣ–ತೃತೀಯ ಸ್ಥಾನವನ್ನು ಪಡೆದಿರುತ್ತಾರೆ. ಶಾಲಾ ಆಡಳಿತ ಮಂಡಳಿ, ಅಧ್ಯಾಪಕ ವೃಂದ ಅಭಿನಂದನೆಗಳನ್ನು ಸಲ್ಲಿಸಿರುತ್ತಾರೆ.

## 'ಸ್ವಚ್ಛತಾ ಸಪ್ತಾಹ' ಕಾರ್ಯಕ್ರಮ



ದಿನಾಂಕ 07.09.2017ರಂದು 'ಸ್ವಚ್ಛತಾ ಪಖ್ವಾಡ'ದ ಅಂಗವಾದ 'ಸ್ವಚ್ಛತಾಜಾಗೃತಿ ದಿನ' ಕಾರ್ಯಕ್ರಮ ಶ್ರೀರಾಮ ಪ್ರೌಢಶಾಲೆಯ ಮಧುಕರ ಸಭಾಂಗಣದಲ್ಲಿ ನೆರವೇರಿತು. ಕಾರ್ಯಕ್ರಮದಲ್ಲಿ 8ನೇ ತರಗತಿ ವಿದ್ಯಾರ್ಥಿಗಳಾದ ಅಮೃತಾ 8 ಏಕಲವ್ಯ, ಆದಿತ್ಯಮೈಥಿಲಿ 8 ಕಣ್ಣಿಗಿ, ವಿಂದ್ಯಾಶ್ರೀ 8 ನಚಿಕೇತ ಇವರು ತಾವು ರಚಿಸಿದ 'ಸ್ವಚ್ಛ ಭಾರತದ ನಿರ್ಮಾಣದಲ್ಲಿ ನನ್ನ ಪಾತ್ರ' ಎಂಬ ಪ್ರಬಂಧವನ್ನು ಮಂಡಿಸಿದರು.

ಈ ಸಂದರ್ಭದಲ್ಲಿ ಶಾಲಾ ಮು.ಶಿಕ್ಷಕರಾದ ಶ್ರೀ ರಮೇಶ್‌ಎನ್ ಉಪಸ್ಥಿತರಿದ್ದರು. ಗೌತಮಿ, ಸುಶ್ಮಿತಾ(9 ಓಬವ್ವ) ಕಾರ್ಯಕ್ರಮ ನಿರೂಪಿಸಿದರು.

## ಶೈಕ್ಷಣಿಕ ಪ್ರವಾಸ

ದಿನಾಂಕ – 08.09.2017ರಿಂದ 11.09.2017ರವರೆಗೆ ಪ್ರೌಢಶಾಲಾ ವಿಭಾಗದ 9 ಹಾಗೂ 10 ನೇ ತರಗತಿಯ ಶೈಕ್ಷಣಿಕ ಪ್ರವಾಸ ಏರ್ಪಟ್ಟಿತು. ಪ್ರವಾಸದಲ್ಲಿ ಬಾದಾಮಿ, ಪಟ್ಟದಕಲ್ಲು, ಐಹೊಳೆ, ಕೂಡಲಸಂಗಮ, ಹಂಪಿ, ತುಂಗಭದ್ರಾ ಅಣೆಕಟ್ಟು, ಚಿತ್ರದುರ್ಗದ ಕೋಟೆ, ಚಂದ್ರವಳ್ಳಿ ತೋಟ ಮುಂತಾದ ಪ್ರವಾಸ ತಾಣಗಳನ್ನು ವೀಕ್ಷಿಸಿದರು. ಪ್ರವಾಸದಲ್ಲಿ 46 ವಿದ್ಯಾರ್ಥಿಗಳು ಹಾಗೂ 4 ಅಧ್ಯಾಪಕರು ಭಾಗವಹಿಸಿದರು.

## ತಾಲೂಕು ಮಟ್ಟದ ಕ್ರೀಡಾಕೂಟ ಉದ್ಘಾಟನೆ

ಬಂಟ್ವಾಳ ತಾಲೂಕು ಮಟ್ಟದ ಕಬಡ್ಡಿ ಪಂದ್ಯಾಟವನ್ನು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಡಾ. ಪ್ರಭಾಕರ ಭಟ್‌ರವರು ಉದ್ಘಾಟಿಸಿ–ಕಬಡ್ಡಿ ಶಕ್ತಿಯುತ ಆಟ ಅಲ್ಲದೆ ದೇಶೀಯ ಆಟ. ಉತ್ತಮ ಆರೋಗ್ಯ ವೃದ್ಧಿಗಾಗಿ ಕ್ರೀಡೆಗಳು ತುಂಬಾ ಪ್ರಯೋಜನಕಾರಿಯಾಗಿದೆ.

ಅಧ್ಯಕ್ಷತೆಯನ್ನು ಶ್ರೀರಾಮ ವಿದ್ಯಾ–ಕೇಂದ್ರ ಸಂಚಾಲಕರಾದ ವಸಂತಮಾಧವ ವಹಿಸಿದ್ದರು. BRP ನಾರಾಯಣ ಗೌಡ, ತಾಲೂಕು ಕ್ರೀಡಾ ಪರಿವೀಕ್ಷಕಿ ರತ್ನಾವತಿ, ಜಿಲ್ಲಾ ಶಾ.ಶಿ.ಶಿ.ಸಂಘದ ಗೌರವ ಸಲಹೆಗಾರ ಗಂಗಾಧರ ರೈ, ತಾ.ದೈ.ಶಿ.ಶಿ.ಸಂಘದ ಅಧ್ಯಕ್ಷ ಜಗದೀಶ ಕಲ್ಲಡ್ಕ, ಗೌರವಾಧ್ಯಕ್ಷರಾದ ಶ್ರೀ ರಾಧಾಕೃಷ್ಣ ಅಡ್ಯಂತಾಯ, ರಾಜ್ಯ ಉತ್ತಮ ಶಿಕ್ಷಕ ಪ್ರಶಸ್ತಿ ವಿಜೇತ ರಮೇಶ್ ಬಾಯಾರು, ಯೋಜನಾ ಸಬಲೀಕರಣ ಮತ್ತು ಕ್ರೀಡಾಧಿಕಾರಿ ನವೀನ್ ಪಿ.ಎಸ್ ಅಂತರಾಷ್ಟ್ರೀಯ ಕ್ರೀಡಾಪಟು ಶಂಕರ್ ವಿ, ಪ್ರೌಢಶಾಲಾ ಮುಖ್ಯ ಶಿಕ್ಷಕರಾದ ರಮೇಶ್ ಎನ್ ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಶ್ರೀರಾಮ ಪ್ರೌಢಶಾಲಾ ದೈ.ಶಿಕ್ಷಕರಾದ ಶ್ರೀ ರಾಧಾಕೃಷ್ಣ ಅಡ್ಯಂತಾಯ ನಿರೂಪಿಸಿ, ಪ್ರೌಢಶಾಲಾ ಕಲಾ ಶಿಕ್ಷಕರಾದ ಶ್ರೀ ಜಿನ್ನಪ್ಪ ಏಳ್ತಿಮಾರ್ ಸ್ವಾಗತಿಸಿ, ಜಗದೀಶ್ ಕಲ್ಲಡ್ಕ ವಂದಿಸಿದರು.

## ವೃತ್ತಿ ಶಿಕ್ಷಣ ವಸ್ತುಗಳ ವಸ್ತು ಪ್ರದರ್ಶನ ಮತ್ತು ಕಲಿಕೋತ್ಸವ

ಸಾರ್ವಜನಿಕ ಶಿಕ್ಷಣ ಇಲಾಖೆ– ದ.ಕ.ಜಿಲ್ಲಾ ವೃತ್ತಿ ಶಿಕ್ಷಣ ಶಿಕ್ಷಕರ ಸಂಘ ಮತ್ತು ಸಂತ ವಿಕ್ಟರ್ ಬಾಲಿಕಾ ಪ್ರೌಢಶಾಲಾ ವತಿಯಿಂದ ನಡೆದ ವೃತ್ತಿ ಶಿಕ್ಷಣ ವಸ್ತುಗಳ ವಸ್ತು ಪ್ರದರ್ಶನ ಮತ್ತು ಕಲಿಕೋತ್ಸವದಲ್ಲಿ ಶ್ರೀರಾಮ ಪ್ರೌಢಶಾಲೆಯ ತೋಟಗಾರಿಕಾ ವಿಭಾಗದಲ್ಲಿ ತೃತೀಯ ಸ್ಥಾನ ಪಡೆದಿದೆ. ಶ್ರೀರಾಮ ವಿದ್ಯಾಕೇಂದ್ರದ ಸಂಚಾಲಕರಾದ ಶ್ರೀ ವಸಂತಮಾಧವರಿಂದ ಬಹುಮಾನವನ್ನು ಸ್ವೀಕರಿಸಿದರು. ಮುಖ್ಯೋಪಾಧ್ಯಾಯರಾದ ಶ್ರೀ ರಮೇಶ ಎನ್, ವೃತ್ತಿ ಕಲಾ ಶಿಕ್ಷಕರಾದ ಶ್ರೀ ಜಿನ್ನಪ್ಪ ಏಳ್ತಿಮಾರ್ ಉಪಸ್ಥಿತರಿದ್ದರು.

## ಪದವಿ ಪೂರ್ವ ವಿಭಾಗ

- 01/09/2017 ರಂದು ರಾಣಿ ಅಬ್ಬಕ್ಕ ತುಳು ಅಧ್ಯಯನಕೇಂದ್ರ ಬಂಟ್ವಾಳದ ಇತಿಹಾಸ ಕಾರ್ಯಾಗಾರವನ್ನು ಶ್ರೀರಾಮ ಪದವಿ ಪೂರ್ವಕಾಲೇಜಿನ ಇತಿಹಾಸ ಉಪನ್ಯಾಸಕ ಶ್ರೀ ತಿರುಮಲೇಶ್ವರ ಪ್ರಶಾಂತ್ ಭಾಗವಹಿಸಿದ್ದರು.
- 01/09/2017 ರಂದು ಶಾರದ ಪದವಿಪೂರ್ವ ಕಾಲೇಜಿನಲ್ಲಿ 'ಶಾರದ ಮಹೋತ್ಸವ'ದ ಅಂಗವಾಗಿ ನಡೆದ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಸಾಮೂಹಿಕ ಭಜನೆಯಲ್ಲಿ ದ್ವಿತೀಯ ಸ್ಥಾನವನ್ನು ಪಡೆದಿರುತ್ತಾರೆ.

## ಜಿಲ್ಲಾ ಮಟ್ಟದ ಜ್ಞಾನ ವಿಜ್ಞಾನ ಮೇಳ

02.09.2017 ಅರೆವಾಹಕ ವಿದ್ಯುನ್ಮಾನ, ಜೀವಗಳ ಚಲನೆ ಮತ್ತು ಸಂಚಲನೆ, ನಿತ್ಯ ಜೀವನದಲ್ಲಿ ರಾಸಾಯನಿಕ ಚಕ್ರ , ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆ ಎಂಬ ವಸ್ತು ಪ್ರದರ್ಶನದಲ್ಲಿ ಪ್ರಥಮ ಸ್ಥಾನವನ್ನು ಪಡೆದಿರುತ್ತಾರೆ. ಸೃಜನಾತ್ಮಕ ಪ್ರತಿರೂಪ, ವಿಜ್ಞಾನರಸಪ್ರಶ್ನೆಗಳಲ್ಲಿ ದ್ವಿತೀಯ ಸ್ಥಾನಗಳನ್ನು ಪಡೆದಿರುತ್ತಾರೆ. ವಿಜ್ಞಾನ ಲೇಖನ ಹಾಗೂ ವಾಚನದಲ್ಲಿ ಪ್ರಥಮ ಸ್ಥಾನವನ್ನು ಪಡೆದಿರುತ್ತಾರೆ. ಭೌತಶಾಸ್ತ್ರ, ರಸಾಯನಶಾಸ್ತ್ರ ಪ್ರಯೋಗಗಳಲ್ಲಿ ಪ್ರಥಮ ಸ್ಥಾನ. ಜೀವಶಾಸ್ತ್ರ ಪ್ರಯೋಗದಲ್ಲಿ ದ್ವಿತೀಯ ಸ್ಥಾನ. ವೈದಿಕ ಗಣಿತ ರಸಪ್ರಶ್ನೆಯಲ್ಲಿ ದ್ವಿತೀಯ ಸ್ಥಾನ, ವೈದಿಕ ಗಣಿತ ಲೇಖನ ಮತ್ತು ವಾಚನದಲ್ಲಿ ಪ್ರಥಮ ಸ್ಥಾನ. ಗಣಿತ ಮಾದರಿ ಪ್ರದರ್ಶನದಲ್ಲಿ ದ್ವಿತೀಯ ಸ್ಥಾನ. ಸಂಸ್ಕೃತಿ ಜ್ಞಾನ ಲೇಖನ ವಾಚನ, ಗಣಿತ ಪ್ರಯೋಗ ಹಾಗೂ ಸಂಸ್ಕೃತಿ ಜ್ಞಾನ ರಸಪ್ರಶ್ನೆಗಳಲ್ಲಿ ತೃತೀಯ ಸ್ಥಾನಗಳನ್ನು ಪಡೆದಿರುತ್ತಾರೆ.

- 03/09/2017 ರಂದು ಸಮಾಜ ಸುಧಾರಕ ದಿ. ಕುದ್ಮಲ್ ರಂಗರಾವ್‌ರವರ ಜಯಂತಿ ಆಚರಣೆ ಅಂಗವಾಗಿ, ಪದವಿ ಪೂರ್ವ/ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ನಡೆಸಲಾದ ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ನಿವೇದಿತಾ.ಎನ್ , ಪ್ರಥಮ ವಿಜ್ಞಾನ , ದ್ವಿತೀಯ ಬಹುಮಾನ ಪಡೆದಿರುತ್ತಾರೆ.
- 5/09/17 ಮಂಜುನಾಥ ಇವರು ಕುಸ್ತಿಯ ಬಗ್ಗೆ ಮಕ್ಕಳಿಗೆ ಮಾಹಿತಿಯನ್ನು ನೀಡಿದರು.
- 07/09/2017 ರಂದು ಎಸ್.ವಿ.ಎಸ್ ಕಾಲೇಜಿನಲ್ಲಿ ನಡೆದ ಜಿಲ್ಲಾ ಮಟ್ಟದ ವಿಕಾಸ್ – 2017ರಲ್ಲಿ ಕೊಲಾಜ್, ಹಾಡು ಹಾಗೂ ನಾಟಕದಲ್ಲಿ ಭಾಗವಹಿಸಿ, ಕೊಲಾಜ್ ಸ್ಪರ್ಧೆಯಲ್ಲಿ ಹರಿಚರಣ್ ದ್ವಿತೀಯ ವಿಜ್ಞಾನ ಪ್ರಥಮ ಬಹುಮಾನ ಹಾಗೂ ಹಾಡುಗಾರಿಕೆ ಪ್ರಥಮ ವಿಜ್ಞಾನದ ಕುಮಾರಿ ಗಾಯತ್ರಿ ದ್ವಿತೀಯ ಬಹುಮಾನ ಪಡೆದಿರುತ್ತಾರೆ.
- 07/09/2017 ರಂದು ಪ್ರೆಸ್ಟೀಜ್ ಪದವಿ ಪೂರ್ವ ಕಾಲೇಜು ಜೆಪ್ಪಿನ ಮೊಗರುನಲ್ಲಿ ನಡೆದ ವಾಣಿಜ್ಯ ಕಾರ್ಯಾಗಾರಕ್ಕೆ ವಾಣಿಜ್ಯ ವಿಭಾಗದಿಂದ ದಿನೇಶ್ ಶ್ರೀಮಾನ್ ಭಾಗವಹಿಸಿದ್ದರು.
- 07/09/2017 ರಂದು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನಲ್ಲಿ ನಡೆದ ಜಿಲ್ಲಾಮಟ್ಟದ ಈಜು ಸ್ಪರ್ಧೆಯಲ್ಲಿ ಪದವಿಪೂರ್ವ ವಿಭಾಗದ ಹೇಮಂತ್ ದ್ವಿತೀಯ ವಾಣಿಜ್ಯ 'ಎ' ತೃತೀಯ ಸ್ಥಾನವನ್ನು ಪಡೆದಿರುತ್ತಾನೆ.
- 07/09/2017 ರಂದು ರಾಮಕೃಷ್ಣ ಮಠ ಮಂಗಳಾದೇವಿ ಇಲ್ಲಿ ನಡೆದ 'ಪ್ರಜ್ಞಾ–2017' ಉಪನ್ಯಾಸಕರಿಗೆ ಶಿಕ್ಷಣದ ಕುರಿತಾಗಿ ಮಾಹಿತಿ ಕಾರ್ಯಾಗಾರ ನಡೆದಿದ್ದು ಪದವಿಪೂರ್ವ ವಿಭಾಗದಿಂದ ವಾಣಿಜ್ಯ ವಿಭಾಗದ ಶ್ರೀ ಲಕ್ಷ್ಮೀಶ ಶ್ರೀಮಾನ್ ಮತ್ತು ಯಶಸ್ವಿನಿ ಮಾತಾಜಿ ಭಾಗವಹಿಸಿದ್ದರು.
- 08/09/2017 ರಂದು ಭಾವನಾ ಸಾಂಸ್ಕೃತಿಕ ಸಂಗದ ವತಿಯಿಂದ ನಡೆಸಲಾದ ಗುಂಪುಶಃ ದೇಶಭಕ್ತಿಗೀತೆ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ದ್ವಿತೀಯ ವಾಣಿಜ್ಯ 'ಸಿ' ದ್ವಿತೀಯ ಸ್ಥಾನವನ್ನು ಪ್ರಥಮ ವಾಣಿಜ್ಯ 'ಸಿ' ವಿಭಾಗ, ತೃತೀಯ ಸ್ಥಾನವನ್ನು ದ್ವಿತೀಯ ವಿಜ್ಞಾನ 'ಎ' ವಿಭಾಗದವರು ಪಡೆದಿರುತ್ತಾರೆ.
- 09/09/2017 ರಂದು ತಾಲೂಕು ಮಟ್ಟದ ಕಬಡ್ಡಿ ಮತ್ತು ಖೋ–ಖೋ ಪಂದ್ಯಾಟದಲ್ಲಿ ಪದವಿಪೂರ್ವ ವಿಭಾಗದವರು ಭಾಗವಹಿಸಿದ್ದರು.

● 12.9.17 ರಂದ ಬಲ್ಮಠ ಮಹಿಳಾ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಸಮಾಜಶಾಸ್ತ್ರ ಕಾರ್ಯಾಗಾರದಲ್ಲಿ ಶ್ರೀಮತಿ ಅಮಿತಾ ಭಾಗವಹಿಸಿದ್ದರು.

● 12.9.17 ರಂದು ಶಾರದಾ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಜೀವಶಾಸ್ತ್ರ ಕಾರ್ಯಾಗಾರದಲ್ಲಿ ಕು.ಶೈಲಿನಿ ಭಾಗವಹಿಸಿದ್ದರು.

**'ಸಾಹಿತ್ಯ ಕಾರ್ಯಾಗಾರ 16/09/17ರ**

'ಪ್ರತಿಭಾರಾಮ ಸಾಹಿತ್ಯ ಸಂಘ'ದ ವತಿಯಿಂದ 'ಸಾಹಿತ್ಯ ಕಾರ್ಯಾಗಾರ'ವನ್ನು ನೆರವೇರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಖಿಲ ಭಾರತ ಸಾಹಿತ್ಯ ಪರಿಷತ್‌ನ ಅಧ್ಯಕ್ಷರಾದ ಜಯಾನಂದ ಪೆರಾಜೆಯವರು ವಹಿಸಿದ್ದರು. ಅಖಿಲ ಭಾರತ ಸಾಹಿತ್ಯ ಸಂಘದ ಸಂಚಾಲಕರಾದ ರಾಜಾರಾಂ ನಾಯಕ್‌ರವರು ಉಪಸ್ಥಿತರಿದ್ದರು. ಶ್ರೀರಾಮ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ವಸಂತ್ ಬಲ್ಲಾಳ್‌ರವರು ಕಾರ್ಯಾಗಾರವನ್ನು ಉದ್ಘಾಟಿಸಿದರು.

ಶ್ರೀ ವೆಂಕಟರಮಣ ಸ್ವಾಮಿ ಕಾಲೇಜಿನ ಕನ್ನಡ ಉಪನ್ಯಾಸಕರಾದ ಚೇತನ್ ಮುಂಡಾಜೆಯವರು ನಡೆಸಿಕೊಟ್ಟು 'ಬದುಕನ್ನು ಅರಳಿಸಿ, ಮನಸ್ಸುಗಳನ್ನು ಒಟ್ಟುಗೂಡಿಸುವುದೇ ಸಾಹಿತ್ಯ. ಸಾಹಿತ್ಯ ಓದುವ ಮೂಲಕ ಅನುಭವ ಹೆಚ್ಚುವುದಲ್ಲದೆ, ಕಲಾನುಭವದಿಂದ ಜೀವನ ಪರಿಪೂರ್ಣವಾಗುತ್ತದೆ ಎಂದು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು.

ಪ್ರತಿಭಾರಾಮ ಸಾಹಿತ್ಯ ಸಂಘದ ನಿರ್ದೇಶಕಿಯಾದ ಶ್ರೀಮತಿ ವಿಲಾಸಿನಿ ಹಾಗೂ ಸಹನಿರ್ದೇಶಕಿಯಾದ ಕುಮಾರಿ ಸ್ವಾತಿಯವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

● 24.9.17ರಂದು ನವರಾತ್ರಿಯ ಪ್ರಯುಕ್ತ ಮಟಂತಬೆಟ್ಟು ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮವನ್ನು ನೀಡಿದರು.

## ಪದವಿ ವಿಭಾಗ

**ಓಣಂ ಆಚರಣೆ**

ಕಾಲೇಜಿನಲ್ಲಿ ಪ್ರದೀಪ್ತ ಸಾಂಸ್ಕೃತಿಕ ಸಂಘದ ವತಿಯಿಂದ ಓಣಂ ಹಬ್ಬವನ್ನು ವಿಶೇಷವಾಗಿ ಪೂಕಳಂ, ತಿರುವಾದಿರಾ, ವಾದ್ಯಗೋಷ್ಠಿಸ್ಪರ್ಧೆಗಳನ್ನುಆಯೋಜಿಸುವುದರ ಮೂಲಕ ಆಚರಿಸಲಾಯಿತು. ಅತಿಥಿಗಳಾಗಿ ದಾವಣಗೆರೆಯ ಹಾಲಮ್ಮ ಪದವಿ ಹಾಗೂ ಪದವಿ ಪೂರ್ವ ವಿದ್ಯಾಲಯದ ಪ್ರಾಂಶುಪಾಲರು ಹಾಗೂ ಉಪನ್ಯಾಸಕರುಗಳು ಆಗಮಿಸಿ, ಇಲ್ಲಿ ಸಿಗುವ ಸಂಸ್ಕಾರಯುತ ಶಿಕ್ಷಣ, ಶಿಸ್ತು, ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ತೊಡಗಿಸಿಕೊಳ್ಳುವಿಕೆ ಹಾಗೂ ಒಟ್ಟು ಸಂಸ್ಥೆಯ ವಾತಾವರಣವನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ವೇದಿಕೆಯಲ್ಲಿ ಡಾ। ಪ್ರಭಾಕರ ಭಟ್ ಕಲ್ಲಡ್ಕ, ಪ್ರಾಂಶುಪಾಲ ಕೃಷ್ಣ ಪ್ರಸಾದ್ ಕಾಯರ್‌ಕಟ್ಟೆ, ಪ.ಪೂ ಪ್ರಾಂಶುಪಾಲ ವಸಂತ ಬಲ್ಲಾಳ್, ಪ್ರಾಥಮಿಕ ವಿಭಾಗದ ರವಿರಾಜ್ , ಡಾ। ಕಮಲಾ ಪ್ರಭಾಕರ್ ಭಟ್ ಉಪಸ್ಥಿತರಿದ್ದರು. ಸಾಂಸ್ಕೃತಿಕ ಸಂಘದ ನಿರ್ದೇಶಕರಾದ ಉಪನ್ಯಾಸಕಿ ಹರ್ಷಿತಾ ಮತ್ತು ಜಯಲಕ್ಷ್ಮಿ ಸಹಕರಿಸಿದರು.

● ದಿನಾಂಕ 06-09-2017: "Leadership Development Programme"

ಸಹ್ಯಾದ್ರಿ ಕಾಲೇಜ್ ಮಂಗಳೂರು ಇವರು ನಡೆಸಿರುವ "Leadership Development Programme" ಗೆ ಪದವಿ ವಿಭಾಗದ ಒಟ್ಟು 07 ವಿದ್ಯಾರ್ಥಿಗಳು ಭಾಗವಹಿಸಿರುತ್ತಾರೆ.

**● 06-09-2017: ಪದವಿ ವಿದ್ಯಾರ್ಥಿಗಳಿಂದ ಕೋರ್ಟ್ ಭೇಟಿ**

ಶ್ರೀರಾಮ ಪ್ರಥಮದರ್ಜೆ ಮಹಾವಿದ್ಯಾಲಯ ಕಲ್ಲಡ್ಕ ಮತ್ತು ಮಾನವಿಕ ಸಂಘದ ಜಂಟಿ ಆಶ್ರಯದಲ್ಲಿ ಅಂತಿಮ ಕಲಾ ವಿಭಾಗದ ವಿದ್ಯಾರ್ಥಿಗಳ ಕೋರ್ಟ್ ಭೇಟಿ ಕಾರ್ಯಕ್ರಮ ಜರಗಿತು. ಬಿ.ಸಿ.ರೋಡಿನಲ್ಲಿರುವ ತಾಲೂಕಿನ ತಳಹಂತದ ನ್ಯಾಯಾಲಯಕ್ಕೆ ಒಟ್ಟು 36 ವಿದ್ಯಾರ್ಥಿಗಳನ್ನೊಳಗೊಂಡ 3 ತಂಡಗಳು ನ್ಯಾಯಾಲಯ ಭೇಟಿ ನೀಡಿದರು.

● ದಿನಾಂಕ 07-09-2017: Orientation Programme for College Faculty

ಮಂಗಳೂರು ರಾಮಕೃಷ್ಣ ಮಠ ಇಲ್ಲಿ ಕಾಲೇಜು ಉಪನ್ಯಾಸಕರಿಗೆ ನಡೆದ ಒಂದು ದಿನದ Orientation Programme ಕಾರ್ಯಕ್ರಮದಲ್ಲಿ ಪದವಿ ವಿಭಾಗದ ಉಪನ್ಯಾಸಕರುಗಳಾದ ಶ್ರೀದೇವಿ, ಗಂಧರ್ವ ಹಾಗೂ ಸುಶ್ಮಿತಾ ಭಾಗವಹಿಸಿರುತ್ತಾರೆ.

**● 11.09.2017 ಚಿಕಾಗೋ ಸಮ್ಮೇಳನದ 125ನೇ ವರ್ಷಾಚರಣೆ**

ಟೀಂ ವಿವೇಕ್‌ನ ಆಶ್ರಯದಲ್ಲಿ ಶ್ರೀರಾಮ ಪದವಿ ವಿಭಾಗದಲ್ಲಿ ಚಿಕಾಗೋ ಸಮ್ಮೇಳನದ 125ನೇ ವರ್ಷಾಚರಣೆ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪದವಿ ವಿಭಾಗದ ಕನ್ನಡ ಉಪನ್ಯಾಸಕ ಯತಿರಾಜ್ ವಹಿಸಿದ್ದರು. ವೇದಿಕೆಯಲ್ಲಿ ಅತಿಥಿಗಳಾಗಿ ಪದವಿ ವಿಭಾಗದ ವಾಣಿಜ್ಯ ಉಪನ್ಯಾಸಕಿ ವಿನುತಲಕ್ಷ್ಮೀ ಹಾಗೂ ಶಿಲ್ಪಾ ಮಾತಾಜಿ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಚಿಕಾಗೋ ಸಮ್ಮೇಳನದ ವಿಶೇಷತೆ ಹಾಗೂ ವಿವರಣೆಯನ್ನು ದ್ವಿತೀಯ ಬಿ.ಕಾಂ ವಿದ್ಯಾರ್ಥಿ ಮಂಜುನಾಥ್ ನೀಡಿದರು. ಕಾರ್ಯಕ್ರಮವನ್ನು ವಿದ್ಯಾರ್ಥಿಗಳಾದ ಜಯರಾಜ್ ನಿರೂಪಿಸಿ, ಅನುಷಾ ಸ್ವಾಗತಿಸಿ ಅಕ್ಷತಾ ವಂದಿಸಿದರು.

● 23.09.2017: ಮಂಗಳೂರು ವಿಶ್ವವಿದ್ಯಾನಿಲಯದ ಇಂಗ್ಲೀಷ್ ಶಿಕ್ಷಕರ ಕಾರ್ಯಗಾರವು ಬಂಟ್ವಾಳ ಶ್ರೀ ವೆಂಕಟರಮಣ ಕಾಲೇಜಿನಲ್ಲಿ ನಡೆಯಿತು. ಪದವಿ ವಿಭಾಗದ ಉಪನ್ಯಾಸಕರಾದ ಶ್ರೀದೇವಿ ಹಾಗೂ ಲತಾಶ್ರೀ ಭಾಗವಹಿಸಿದ್ದರು.

**● 23.09.2017 ಮತ್ತು 24.09.2017: Marketing Magagement ಮಾಹಿತಿ ಕಾರ್ಯಗಾರ:**

Globe Institute for Strtegic Dialogue ಮಂಗಳೂರು ಇವರು ಮಂಗಳೂರು ಬಲ್ಮಠ ಕಾಲೇಜಿನಲ್ಲಿ "Marketing Management " ಎಂಬ ವಿಷಯದ ಕುರಿತು ನಡೆಸಿದ ಕಾರ್ಯಗಾರಕ್ಕೆ ಪದವಿ ವಿಭಾಗದ ಶ್ರೀಯುತ ಗುರುಪ್ರಸಾದ್ ಇವರು ಭಾಗವಹಿಸಿರುತ್ತಾರೆ.

**● 25.09.2017: ರಾಷ್ಟ್ರೀಯ ಸೇವಾ ಯೋಜನೆಯ ಸ್ಥಾಪನಾ ದಿನಾಚರಣೆ**

ಶ್ರೀರಾಮ ಪ್ರಥಮದರ್ಜೆ ಕಾಲೇಜು ಇದರ ರಾಷ್ಟ್ರೀಯ ಸೇವಾ ಯೋಜನೆಯ ಸ್ಥಾಪನಾ ದಿನಾಚರಣೆಯ ಕಾರ್ಯಕ್ರಮವನ್ನು ಭಾರತ ಸೇವಾ ಆಶ್ರಯ ಕನ್ಯಾನ ಇಲ್ಲಿ ಆಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಭಾರತ ಸೇವಾ ಆಶ್ರಮದ ಕಾರ್ಯದರ್ಶಿಯಾಗಿರುವ ಈಶ್ವರ ಭಟ್ ಇವರು ಆಶ್ರಮದ ಸ್ಥಾಪಕರಾದ ಶ್ರೀ ಧೀರೇಂದ್ರ ನಾಥ್ ಭಟ್ಟಾಚಾರ್ಯ ಆಶ್ರಮದ ಕಾರ್ಯಚಟುವಟಿಕೆಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದರು. ಸುಮಾರು 10 ಗಂಟೆಯಿಂದ ಮಧ್ಯಾಹ್ನ 1.30ರವರೆಗೆ ಸ್ವಯಂಸೇವಕರು ಶ್ರಮದಾನ ಕಾರ್ಯಕ್ರಮದಲ್ಲಿ ತೊಡಗಿದರು.

ಮಧ್ಯಾಹ್ನದ ನಂತರ ವಿದ್ಯಾರ್ಥಿಗಳಿಂದ ಮತ್ತು ಆಶ್ರಮದ ನಿವಾಸಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಜೊತೆಗೆ ವಿದ್ಯಾರ್ಥಿಗಳು ಆಶ್ರಮದ ನಿವಾಸಿಗಳ ಕ್ಷೇಮವನ್ನು ವಿಚಾರಿಸಿದರು. ಕೊನೆಯದಾಗಿ ವಿದ್ಯಾರ್ಥಿಗಳ ಮತ್ತು ಆಶ್ರಮದ ನಿವಾಸಿಗಳು ಧನಾತ್ಮಕವಾದ ಅನಿಸಿಕೆಯನ್ನು ಹಂಚಿಕೊಂಡರು. ಮಕ್ಕಳ ಮೇಲೆ ಈ ಭೇಟಿಯು ಪರಿಣಾಮಕಾರಿಯಾದ ಪ್ರಭಾವನ್ನು ಬೀರಿದೆ. ಈ ಸಂಧರ್ಭದಲ್ಲಿ ಉಪನ್ಯಾಸಕರಾದ ಹರೀಶ್ ಎ, ಸಚಿನ್, ಸುನೀತಾ ಹಾಗೂ ಲತಾಶ್ರೀ ಇವರು ಉಪಸ್ಥಿತರಿದ್ದರು. ಒಟ್ಟು 82 ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.